**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ನಂಜನಗೂಡು**

**ಸಿ.ಸಿ. ನಂಬರ್:733/2019**

ಫಿರ್ಯಾದಿ : ಹೆಚ್ ಎಂ ನಟರಾಜ್ ಬಿನ್ ಲೇ.ಹೆಚ್ ಎಂ ಮಹದೇವಪ್ಪ,
[illegible] ವರ್ಷದ ಮಹೇಶ್ ಕಾಂಪ್ಲೆಕ್ಸ್ ರಸ್ತೆ,
ನಂಜನಗೂಡು.

ವಿರುದ್ಧ

ಆರೋಪಿ : ರವಿಶಂಕರ್ ಬಿನ್ ಲೇ.ಪುಟ್ಟಣ್ಣ, 45 ವರ್ಷ,
ಶಿವಶಕ್ತಿ ತೋಟಗಾರಿಕೆ ಮತ್ತು ಇಟ್ಟಿಗೆ ಫಾರಂ ಹೌಸ್,
ದೇಬೂರು, ನಂಜನಗೂಡು ತಾಲ್ಲೂಕು.

: ಆರೋಪಣೆ :

ವಿನುತಾ.ಡಿ.ಎಸ್ ಬಿ.ಎಸ್‌ಸಿ (ಸಿಬಿ), ಎಲ್‌ಎಲ್‌ಬಿ 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ನಂಜನಗೂಡು, ಆದ ನಾನು ನಿಮ್ಮ ಮೇಲೆ ಈ ಕೆಳಕಂಡ ಆಪಾದನೆಯನ್ನು ಹೊರೆಸುವುದೇನೆಂದರೆ:

ಮೇಲ್ಕಂಡ ಆರೋಪಿಯಾದ ನಿಮ್ಮ ಪತ್ನಿಗೆ ಅವರ ತಾತನ ಮೂಲಕ ಫಿರ್ಯಾದುದಾರರಿಗೆ ಸಂಬಂಧಿಕರಾಗಿದ್ದು, ಆರೋಪಿಯಾದ ನೀವು ಫಿರ್ಯಾದುದಾರರ ನಂಜನಗೂಡಿನ ಕಟ್ಟಡ ನಿರ್ಮಾಣಕ್ಕೆ ಇಟ್ಟಿಗೆಯನ್ನು ಪೂರೈಸುತ್ತಿದ್ದು, ಆರೋಪಿಯಾದ ನೀವು ಮತ್ತು ಫಿರ್ಯಾದುದಾರರು ಗೊಬ್ಬರ ಉದ್ಯಮವನ್ನು ನಂಜನಗೂಡಿನಲ್ಲಿ ನಡೆಸುತ್ತಿದ್ದು, ಆರೋಪಿಯಾದ ನೀವು ನಂಜನಗೂಡಿನ ಹುಲ್ಲಹಳ್ಳಿ ರಸ್ತೆಯಲ್ಲಿ ಮಹಾಲಕ್ಷ್ಮಿ ಸಂಕೀರ್ಣವನ್ನು ನಿರ್ಮಿಸುತ್ತಿರುವಾಗ, ಫಿರ್ಯಾದುದಾರರು ಎಂ/ಎಸ್ ರೆಪ್ಕೋ ಹೋಮ್ ಫೈನಾನ್ಸ್ ಲಿಮಿಟೆಡ್, ಮೈಸೂರುನಿಂದ ಎರವಲು ಪಡೆದ ಸಾಲಕ್ಕೆ ಜಾಮೀನುದಾರರಾಗಿದ್ದರು, ಇನ್ನೂ ಸಾಲವನ್ನು ಆರೋಪಿಯಾದ ನೀವು ತೀರಿಸಿರುವುದಿಲ್ಲ. ಆರೋಪಿಯಾದ ನೀವು ನಿಮ್ಮ ದರದು ನಿಮಿತ್ತ ಅಂದರೆ ವೈಕ್ತಿಕತೆಗೆ ಹಣದ ಅವಶ್ಯಕತೆ ಇದೆ ಎಂದು ಫಿರ್ಯಾದುದಾರರಿಂದ ದಿ:05.11.2018 ರಂದು ರೂ.25,00,000/- ಗಳನ್ನು ಕೈಸಾಲವಾಗಿ ಪಡೆದುಕೊಂಡು, ಸದರಿ ಮೊಬಲಗನ್ನು ವಾರದೊಳಗಾಗಿ ಮರುಮರುಪಾವತಿ ಮಾಡುವುದಾಗಿ ಒಪ್ಪಿರುತ್ತೀರಿ, ಸದರಿ ಮೊಬಲಗನ್ನು ಮರುಪಾವತಿ ಮಾಡದೇ ಇದ್ದಾಗ ಫಿರ್ಯಾದುದಾರರು ಹಣವನ್ನು ಹಿಂತಿರುಗಿಸುವಂತೆ ಕೇಳಿಕೊಂಡಾಗ ಆರೋಪಿಯಾದ ನೀವು ನಿಮಗೆ ಸೇರಿದ ನಿವೇಶನ ಅಥವಾ

ಜಮೀನು ಖರೀದಿಸಲು ಹೇಳಿದ್ದು, ಫಿರ್ಯಾದುದಾರರು ಆರೋಪಿಯಾದ ನಿಮ್ಮ ಹೇಳಿಕೆಯನ್ನು ನಿರಾಕರಿಸಿರುತ್ತಾರೆ, ನಂತರ ಆರೋಪಿಯಾದ ನೀವು ಫಿರ್ಯಾದುದಾರರಿಗೆ ಬಡ್ಡಿಯನ್ನು ಪಾವತಿಸಲು ಸಿದ್ಧ ಎಂದು ತಿಳಿಸಿದ್ದು ಮತ್ತು ಸಾಲದ ಮೊತ್ತವನ್ನು ಮರುಪಾವತಿಸಲು ಸಮಯ ವಿಸ್ತರಿಸುವಂತೆ ವಿನಂತಿಸಿರುತ್ತೀರಿ, ಆದರೆ ಫಿರ್ಯಾದುದಾರರು ಒಪ್ಪದ ಕಾರಣ ಆರೋಪಿಯಾದ ನೀವು ಉಳಿತಾಯ ಖಾತೆ ಹೊಂದಿರುವ ಐಸಿಐಸಿಐ ಬ್ಯಾಂಕ್, ಚೆಕ್ ನಂ:107802 ಕ್ಕೆ ರೂ.25,00,000/- ಗಳನ್ನು ದಿನಾಂಕ:26.12.2018 ಎಂದು ನಮೂದಿಸಿ ಫಿರ್ಯಾದುದಾರರ ಹೆಸರಿಗೆ ನೀಡಿದ್ದು, ತದನಂತರ ಪಿರ್ಯಾದುದಾರರು ಸದರಿ ಚೆಕ್ಕನ್ನು ನಗದೀಕರಿಸಿಕೊಳ್ಳಲು ತಮ್ಮ ಉಳಿತಾಯ ಖಾತೆಯಿರುವ ಹೆಚ್ ಡಿ ಎಫ್ ಸಿ ಬ್ಯಾಂಕ್,ನಂಜನಗೂಡು ಶಾಖೆಯ ಮೂಲಕ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು ''ಅಕೌಂಟ್ ಕ್ಲೋಸ್ಡ್'' ಎಂಬ ಹಿಂಬರಹದೊಂದಿಗೆ ದಿ:28.12.2018 ರಂದು ನಗದೀಕೃತಗೊಳ್ಳದೆ ತಿರಸ್ಕೃತಗೊಂಡಿರುತ್ತದೆ ಎಂದು ತಿಳಿಸಿರುತ್ತಾರೆ, ಅನಂತರ ಪಿರ್ಯಾದುದಾರರು ಮೇಲ್ಕಂಡ ವಿಷಯವನ್ನು ನಮೂದಿಸಿ ವಕೀಲರ ಮೂಲಕ ನಿಮಗೆ ದಿ.18.01.2019 ರಂದು ನೋಟಿಸನ್ನು ಕಳುಹಿಸಿದ್ದು, ಸದರಿ ನೋಟೀಸಿಗೆ ಆರೋಪಿಯಾದ ನೀವು ಸಮಂಜಸವಾದ ಪ್ರತ್ಯುತ್ತರವನ್ನು ನೀಡಿದ್ದು, ಈ ಸಂಬಂಧ ನೀವು ಯಾವುದೇ ಕ್ರಮ ಕೈಗೊಳ್ಳದೇ ಇದ್ದುದರಿಂದ ಆರೋಪಿಯಾದ ನೀವು ವರ್ಗಾವಣೆ ಲಿಖಿತ ಅಧಿನಿಯಮ ಕಲಂ 138 ರಡಿಯಲ್ಲಿ ದಂಡನೀಯವಾದ ಅಪರಾದವನ್ನು ಈ ನ್ಯಾಯಾಲಯದ ಸಜ್ಞಾಯಲ್ಲಿ ಎಸಗಿರುವಿರೆಂದು ನಿಮ್ಮ ಮೇಲೆ ಅಪಾದಿಸಲಾಗಿದೆ.

*ಪ್ರಶ್ನೆ-1 : ಈಗ ಓದಿ ಹೇಳಿದ ನಿಮ್ಮ ಮೇಲಿನ ಆಪಾದನೆಯನ್ನು ಕೇಳಿದ್ದೀರಾ?*

*ಉತ್ತರ :* ಕೇಳಿದೆ.

*ಪ್ರಶ್ನೆ-2 : ಸದರೀ ಅಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ* ಪ್ರತಿರಕ್ಷೆ ಮಾಡಿಕೊಳ್ಳುವಿರೋ ?

*ಉತ್ತರ :* ಇಲ್ಲ, ಪ್ರತಿರಕ್ಷಣೆ ಮಾಡಿ ಕೊಳ್ಳುತ್ತೇನೆ.

*(ಮೇಲ್ಕಂಡ ಆಪಾದನೆಯನ್ನು ಆರೋಪಿತನಿಗೆ ಕನ್ನಡದಲ್ಲಿ ಓದಿ ಹೇಳಿ ನಂತರ ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆಯೆಂದು ದಿನಾಂಕ 29.09.2021 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸುತ್ತೇನೆ).*

*2ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.*
*ನಂಜನಗೂಡು*